RNU AIR DHARWAD

**SEPTEMBER 22,2024**

**ALL INDIA RADIO- DHARWAD**

**PRADESH SAMACHARA (KANNADA) 7:05 AM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ವಿವೇಕಾದಿತ್ಯ ಕನಿಯಾಲ**

<><><>

**ಮುಖ್ಯಾಂಶಗಳು:**

- **ಧಾರವಾಡ ಕೃಷಿ ಮೇಳ; 'ಸ್ಟಾರ್ಟ್ ಅಪ್ ಪೆವಿಲಿಯನ್' ವಿಶೇಷವಾಗಿದೆ – ಪ್ರಲ್ಹಾದ ಜೋಶಿ, ಶ್ಲಾಘನೆ.**
- **ಶಿಕ್ಷಣ ತಜ್ಞ, ಸರ್ ಸಿದ್ದಪ್ಪ ಕಂಬಳಿ ಅವರ ವಿಚಾರಗಳು ಇಂದಿಗೂ ಪ್ರಸ್ತುತ – ಈಶ್ವರ ಖಂಡ್ರೆ.**
- **ವಂಶವಾಹಿ ಚಿಕಿತ್ಸೆ; ಸುಲಭ ಹಾಗೂ ಯೋಗ್ಯ ದರದ ಆರೈಕೆಗಳ ಅಭಿವೃದ್ಧಿಗೆ ಕ್ರಮ – ದಿನೇಶ್ ಗುಂಡೂರಾವ.**
- **ಅಂತಾರಾಷ್ಟ್ರೀಯ ಕಡಲ ಸ್ವಚ್ಛತೆ ದಿನಾಚರಣೆ; ದೇಶದ 32 ಕಡಲ ತೀರಗಳಲ್ಲಿ ಸ್ವಯಂಸೇವಕರಿಂದ ಸ್ವಚ್ಛತಾ ಕಾರ್ಯ.**

<><><>

**ಈಗ ವಾರ್ತೆಗಳ ವಿವರ**

<><><>

**ಇಂದು ರಾಷ್ಟ್ರೀಯ ಮಗಳ ದಿನಾಚರಣೆ. ಪ್ರತಿ ವರ್ಷ ಸೆಪ್ಟೆಂಬರ ತಿಂಗಳ, ನಾಲ್ಕನೇ ಭಾನುವಾರದಂದು, ಮಗಳ ದಿನವನ್ನು ಆಚರಿಸಲಾಗುತ್ತದೆ.**

**ಕುಟುಂಬ ಹಾಗೂ ಸಮಾಜದಲ್ಲಿ, ಹೆಣ್ಣು ಮಗುವನ್ನು ಸಮಾನವಾಗಿ ಕಂಡು, ಗೌರವಿಸಬೇಕೆಂಬುದು ಈ ದಿನಾಚರಣೆಯ ಸದುದ್ದೇಶ.**

<><><>

**'ಹವಾಮಾನ ವೈಪರಿತ್ಯ ನಿರ್ವಹಣೆಗೆ ಕೃಷಿ ತಾಂತ್ರಿಕತೆಗಳು' ಧ್ಯೇಯದೊಂದಿಗೆ, ಆರಂಭಗೊಂಡ, ಧಾರವಾಡ ಕೃಷಿ ವಿಶ್ವವಿದ್ಯಾಲಯದ, ಕೃಷಿ ಮೇಳದಲ್ಲಿ, 'ಸ್ಟಾರ್ಟ್ ಅಪ್ ಪೆವಿಲಿಯನ್' ವಿಶೇಷವಾಗಿದೆ ಎಂದು, ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ಶ್ಲಾಘಿಸಿದರು.**

**24 ರ ವರೆಗೆ, ನಾಲ್ಕು ದಿನಗಳ ಕಾಲ, ಧಾರವಾಡ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ಆಯೋಜಿತ, ಕೃಷಿ ಮೇಳದಲ್ಲಿ ಭಾಗವಹಿಸಿ, ಬೀಜ ಮೇಳಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.**

ಕೃಷಿ ಮೇಳದ ಮೂಲಕ, ಅಲ್ಪ ಸಮಯದಲ್ಲಿ ಹೆಚ್ಚಿನ ಸಂಖ್ಯೆಯ ರೈತರಿಗೆ ಕೃಷಿ ತಂತ್ರಜ್ಞಾನಗಳನ್ನು ತಲುಪಿಸುವುದು, ಮೇಳದ ಮುಖ್ಯ ಉದ್ದೇಶವಾಗಿದೆ. ಬೀಜ ಪೂರೈಕೆ ಸರಪಳಿಯ ಅಡೆತಡೆಗಳನ್ನು ನಿಭಾಯಿಸಲು, ಬೀಜ ಮೇಳ ಕೃಷಿಕರಿಗೆ ಸಹಕಾರಿಯಾಗಿದೆ ಎಂದರು.

ಬೀಜೋತ್ಪಾದನೆಯಲ್ಲಿ ಗಣನೀಯ ಸಾಧನೆಗೈದ ಪರೀಕ್ಷಿತ್‌ಗೌಡ ಹಿರೇಗೌಡರ, ಪ್ರಭುಲಿಂಗ ಗುಡಿ ಹಾಗೂ ಕೃಷಿಕ ಮಹಿಳೆ ಶಿಲ್ಪಾ ಪಾಟೀಲ ಅವರನ್ನು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಗೌರವಿಸಿದರು.

ಸಾಧಕ ಕೃಷಿಕರಾದ ಪರಮೇಶ್ವರ ಜಂತ್ಲಿ, ಕೃಷ್ಣ ಜಾಲಮ್ಮನವರ, ಶಂಕರ ಗೌಡ ಪಾಟೀಲ, ಶೇಖರ್ ಮಾನೋಜಿ, ನಾಗರಾಜ ಹುಲುಗೂರ ಹಾಗೂ ಶಿಲ್ಪಾ ಕುರಿ ಅವರನ್ನು ಕಲಬುರಗಿ ಜಿಲ್ಲೆ ಅಫಸಲಪುರದ ಮಹಾಂತೇಶ ಮಠದ ಸಿದ್ಧ ಶಿವಾಚಾರ್ಯ ಶ್ರೀಗಳು ಸನ್ಮಾನಿಸಿದರು.

ಕೃಷಿ ಮೇಳದಲ್ಲಿ ಮೊದಲ ದಿನವಾದ ನಿನ್ನೆ, ಹಿಂಗಾರಿ ಋತುವಿನ 460 ಕ್ವಿಂಟಾಲ್ ಬಿತ್ತನೆ ಬೀಜಗಳು, 49 ಲಕ್ಷ ರೂಪಾಯಿ ವಹಿವಾಟು ದಾಖಲಿಸಿ ಮಾರಾಟವಾಗಿವೆ. 2 ಲಕ್ಷ 85 ಸಾವಿರ ರೈತರು ಕೃಷಿ ಮೇಳಕ್ಕೆ ಭೇಟಿ ನೀಡಿದ್ದಾರೆ.

<><><>

ಶಿಕ್ಷಣ ತಜ್ಞ, ಸರ್ ಸಿದ್ದಪ್ಪ ಕಂಬಳಿ ಅವರ ವಿಚಾರಗಳು ಮತ್ತು ದೂರದೃಷ್ಟಿ ಇಂದಿಗೂ ಪ್ರಸ್ತುತ. ಅವರ ವ್ಯಕ್ತಿತ್ವ ಮತ್ತು ಕೃತಿತ್ವವನ್ನು, ಯುವ ಪೀಳಿಗೆಗೆ ಪರಿಚಯಿಸುವ ಕಾರ್ಯಕ್ಕೆ, ಆದ್ಯತೆ ನೀಡಲಾಗುವುದು ಎಂದು, ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ಅಳಗುಂಡಿ ಓಣಿಯಲ್ಲಿರುವ, ಸರ್ ಸಿದ್ದಪ್ಪ ಕಂಬಳಿ ಅವರ ನಿವಾಸಕ್ಕೆ ಭೇಟಿ ನೀಡಿದ ಸಚಿವರು, ಸುದ್ದಿಗಾರರೊಂದಿಗೆ ಮಾತನಾಡಿದರು.

ಸರ್ ಸಿದ್ದಪ್ಪ ಕಂಬಳಿ ಅವರ ಪದವಿ, ಜೀವನ ಸಾಧನೆಗಳನ್ನು ಸಂರಕ್ಷಿಸಿ, ಕಾಪಾಡಿಕೊಂಡು ಹೋಗುತ್ತಿರುವ ಅವರ ಕುಟುಂಬಸ್ಥರಿಗೆ ಕೃತಜ್ಞತೆ ಸೂಚಿಸಿದ್ದಾಗಿ, ತಿಳಿಸಿದರು.

<><><>

ಸಚಿವ ಈಶ್ವರ ಖಂಡ್ರೆ ಧ್ವನಿ 58 ಸೆಕೆಂದುಗಳು

<><><>

ಟಿ.ಎಸ್.ರಾಮಚಂದ್ರರಾವ್ ಪತ್ರಿಕೋದ್ಯಮ ಪ್ರಶಸ್ತಿ ಹಾಗೂ ಮೊಹರೆ ಹಣಮಂತರಾಯ ಪತ್ರಿಕೋದ್ಯಮ ಪ್ರಶಸ್ತಿಗಳನ್ನು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಪ್ರಕಟಿಸಿದೆ.

2019 ರಿಂದ 2023ನೇ ಸಾಲಿನ, ಒಟ್ಟು 5 ವರ್ಷಗಳ ಅವಧಿಯ ಪ್ರಶಸ್ತಿಗಳನ್ನು, ಘೋಷಿಸಲಾಗಿದೆ.

ಟಿ.ಎಸ್.ಆರ್. ಪ್ರಶಸ್ತಿಗೆ, ಹಿರಿಯ ಪತ್ರಕರ್ತರುಗಳಾದ, ಶಿವಾಜಿ ಗಣೇಶನ್, ಶ್ರೀಕಾಂತಾಚಾರ್ಯ ಮಣೂರ, ಆರ್.ಪೂರ್ಣಿಮಾ, ಪದ್ಮರಾಜ ದಂಡಾವತಿ ಹಾಗೂ ಸರಜೂ ಕಾಟ್ಕರ್ ಭಾಜನರಾಗಿದ್ದಾರೆ.

ಮೊಹರೆ ಹಣಮಂತರಾಯ ಪತ್ರಿಕೋದ್ಯಮ ಪ್ರಶಸ್ತಿಯನ್ನು, ಗದಗ ಬೆಟಗೇರಿಯ ನವೋದಯ ಪತ್ರಿಕೆಯ ಸಂಪಾದಕ ರಾಜೀವ್ ಕಿದಿಯೂರ, ಬೆಂಗಳೂರಿನ ಸಂವಾದ ಮಾಸಪತ್ರಿಕೆಯ ಸಂಪಾದಕ ಇಂದೂಧರ ಹೊನ್ನಾಪುರ, ಶಿವಮೊಗ್ಗದ ಕ್ರಾಂತಿದೀಪ ಪತ್ರಿಕೆಯ ಸಂಪಾದಕ ಎನ್. ಮಂಜುನಾಥ, ಮುಂಬೈನ ಕರ್ನಾಟಕ ಮಲ್ಲ ಪತ್ರಿಕೆ ಸಂಪಾದಕ ಚಂದ್ರಶೇಖರ

ಪಾಲೆತ್ತಾಡಿ, ಕಲಬುರಗಿ ಜಿಲ್ಲೆಯ ಕರ್ನಾಟಕ ಸಂಧ್ಯಾಕಾಲ ಪತ್ರಿಕೆ ಸಂಪಾದಕ ಶಿವಲಿಂಗಪ್ಪ ದೊಡ್ಡಮನಿ ಅವರಿಗೆ ಘೋಷಿಸಲಾಗಿದೆ.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಪ್ರಶಸ್ತಿ ಪುರಸ್ಕೃತರನ್ನು ಅಭಿನಂದಿಸಿದೆ ಎಂದು ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ತಿಳಿಸಿದ್ದಾರೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಜೀನ್ ಥೆರಪಿ ಆಧಾರಿತ ಪ್ರತಿ ಚಿಕಿತ್ಸೆಗೆ, 7 ರಿಂದ 30 ಕೋಟಿ ರೂಪಾಯಿಗಳ  ್ಟ ವೆಚ್ಚವಾಗುತ್ತದೆ. ನಮ್ಮ ದೇಶದಲ್ಲಿ ಸದ್ಯ ಈ ಚಿಕಿತ್ಸೆ ಲಭ್ಯವಿಲ್ಲ. ರಾಜ್ಯದ ಆರೋಗ್ಯಾಕಾಂಕ್ಷಿಗಳ ಅಗತ್ಯಗಳಿಗೆ ಅನುಗುಣವಾಗಿ, ಕೈಗೆಟುಕುವ ದರ ಮತ್ತು ಸುಲಭ ವಿಧಾನದಲ್ಲಿ, ಜೀನ್ ಚಿಕಿತ್ಸೆಗಳನ್ನು ಅಭಿವೃದ್ಧಿಪಡಿಸಲು, ನಾರಾಯಣ ನೇತ್ರಾಲಯ ಫೌಂಡೇಶನ್ ಮುಂದಾಗಿದೆ ಎಂದು, ಆರೋಗ್ಯ ಖಾತೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ಬೆಂಗಳೂರಿನ ನಾರಾಯಣ ನೇತ್ರಾಲಯ ಫೌಂಡೇಶನ್, ಆಯೋಜಿಸಿರುವ ಎರಡು ದಿನಗಳ, 'ಜೀನ್ ಥೆರಪಿ ಮತ್ತು ಪ್ರಿಸಿಷನ್ ಮೆಡಿಸಿನ್' ಕಾರ್ಯಾಗಾರಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಧನಂಜಯ  ಚಂದ್ರಚೂಡ್ ಅವರು ಮಾತನಾಡಿ, ಅಪರೂಪದ ರೋಗಗಳ ಚಿಕಿತ್ಸೆ ಮತ್ತು ಉಪಶಮನ ಆರೈಕೆಗೆ, ಜೀನ್ ಥೆರಪಿ ಅಭಿವೃದ್ಧಿ ಪಡಿಸಲು, ವೇದಿಕೆ ಲಭಿಸಿದಂತಾಗಿದೆ ಎಂದರು.

ನಾರಾಯಣ ನೇತ್ರಾಲಯದ ಅಧ್ಯಕ್ಷ ಡಾಕ್ಟರ್ ರೋಹಿತ್ ಶೆಟ್ಟಿ, ಈ ಕುರಿತು, ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

ಡಾಕ್ಟರ್ ರೋಹಿತ್ ಶೆಟ್ಟಿ ಧ್ವನಿ 47 ಸೆಕೆಂದುಗಳು

<><><>

ಅಂತಾರಾಷ್ಟ್ರೀಯ ಕಡಲ ಸ್ವಚ್ಛತೆ ದಿನಾಚರಣೆ ಹಿನ್ನೆಲೆ, ನಿನ್ನೆ ದೇಶದ 32 ಕಡಲ ತೀರಗಳಲ್ಲಿ ಸ್ವಚ್ಛತಾ ಕಾರ್ಯವನ್ನು, ಸ್ವಯಂಸೇವಕರು ಕೈಗೊಂಡರು.

ಭಾರತೀಯ ತಟ ರಕ್ಷಕ ಪಡೆ, ಕಾರವಾರದ ಕಡಲ ಜೀವಶಾಸ್ತ್ರ ವಿಭಾಗದ ವತಿಯಿಂದ, ಕಾರವಾರದ ರವೀಂದ್ರನಾಥ್ ಠಾಕೂರ ಕಡಲತೀರದಲ್ಲಿ ಸ್ವಚ್ಛತಾ ಅಭಿಯಾನ ಜರುಗಿತು.

ಕಾರವಾರದ ಕಡಲ ತೀರದಲ್ಲಿನ ತ್ಯಾಜ್ಯವನ್ನು ಹೆಕ್ಕಿ, ಸ್ವಚ್ಛಗೊಳಿಸಿ, ಉತ್ತರಕನ್ನಡ ಜಿಲ್ಲಾಧಿಕಾರಿ ಕೆ.ಲಕ್ಷ್ಮೀ ಪ್ರಿಯಾ, ಕಡಲ ತಟದ ಸ್ವಚ್ಛತಾ ಅಭಿಯಾನಕ್ಕೆ ಚಾಲನೆ ನೀಡಿದರು. 'ಸ್ವಭಾವ ಹಾಗೂ ಸಂಸ್ಕಾರ ಸ್ವಚ್ಛತೆ' ಎಂಬ ಧ್ಯೇಯದೊಂದಿಗೆ, ಅಕ್ಟೋಬರ್ 2ರ ಗಾಂಧಿ ಜಯಂತಿ ವರೆಗೆ, ಈ ಅಭಿಯಾನ ಮುಂದುವರಿಯಲಿದೆ ಎಂದರು.

<><><>

ಮಂಗಳೂರಿನ ಸೋಮೇಶ್ವರ ಕಡಲ ತೀರದಲ್ಲಿ ಸ್ವಚ್ಛತಾ ಕಾರ್ಯಕ್ರಮ ನಡೆಯಿತು.

ಕೇಂದ್ರ ಭೂ ವಿಜ್ಞಾನ ಸಚಿವಾಲಯದ, ಚೆನ್ನೈನ ರಾಷ್ಟ್ರೀಯ ಕರಾವಳಿ ಸಂಶೋಧನಾ ಕೇಂದ್ರದ ನಿರ್ದೇಶದನ್ವಯ, ಮಂಗಳೂರಿನ ಮೀನುಗಾರಿಕಾ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಅಂತಾರಾಷ್ಟ್ರೀಯ ಕಡಲ ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಂಡರು.

<><><>

'ಸ್ವಚ್ಛತೆಯೆಡೆಗೆ ಒಂದು ಹೆಜ್ಜೆ; ಸ್ವಚ್ಛ ಭಾರತ, ಸುಂದರ ರಾ ್ಟ್ರ ನಿರ್ಮಾಣ'ದ ಪರಿಕಲ್ಪನೆಯೊಂದಿಗೆ, ಪ್ರಧಾನಮಂತ್ರಿ ಅವರು ಕರೆ ನೀಡಿದ, 'ಸ್ವಚ್ಛತಾ ಹೀ ಸೇವಾ' ಅಭಿಯಾನಕ್ಕೆ ವ್ಯಾಪಕ ಜನ ಸ್ಪಂದನೆ ದೊರೆತಿದೆ ಎಂದು, ಕೇಂದ್ರದ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಆಯೋಜಿಸಿದ್ದ, ಸಸಿ ನೆಡುವ ಕಾರ್ಯಕ್ರಮದಲ್ಲಿ, ಅವರು ಸಸಿ ನೆಟ್ಟು ಸ್ವಚ್ಛತಾ ಕಾರ್ಯದಲ್ಲಿ ಭಾಗವಹಿಸಿದರು.

ಪ್ರಧಾನಮಂತ್ರಿಗಳ ಕರೆಯಂತೆ 'ಅಮ್ಮನ ಹೆಸರಿನಲ್ಲಿ ಒಂದು ಗಿಡ ಅಭಿಯಾನ'ದ ಭಾಗವಾಗಿ, ಗಿಡ ನೆಟ್ಟು ಎಲ್ಲರೂ ಈ ಅಭಿಯಾನದಲ್ಲಿ ಭಾಗಿಯಾಗುವಂತೆ ಅವರು ಕೋರಿದರು.

ಈಗ ಸಂಕ್ಷಿಪ್ತ ಸುದ್ದಿಗಳು:

ಅಂತಾರಾಷ್ಟ್ರೀಯ ಖ್ಯಾತಿಯ ರುದ್ರವೀಣಾ ವಾದಕ, ನಾದಯೋಗಿ ದತ್ತಾತ್ರೇಯ ಪರ್ವತೀಕರ ಅವರ ಜೀವನಚರಿತ್ರೆ, 'ಬದರಿಧಾಮದ ತಪೋನಿಧಿ' ಕೃತಿ, ಇಂದು ಸಂಜೆ 5 ಗಂಟೆಗೆ, ಬಾಗಲಕೋಟೆ ಜಿಲ್ಲೆ ನವನಗರದ ಕಲಾಭವನದಲ್ಲಿ ಬಿಡುಗಡೆಯಾಗಲಿದೆ.

ಗಂಗಾ ಆರತಿ ಮಾದರಿಯಲ್ಲಿ, ರಾಜ್ಯದಲ್ಲಿ ಕಾವೇರಿ ಆರತಿ ನಡೆಸಲು, ಕೃಷಿ ಖಾತೆ ಸಚಿವ ಚಲುವರಾಯಸ್ವಾಮಿ ನೇತೃತ್ವದ ನಿಯೋಗ, ಅಧ್ಯಯನ ನಡೆಸಲು, ಕಾಶಿಗೆ ತೆರಳಿದೆ.

ಅಂತಾರಾಷ್ಟ್ರೀಯ ಶಾಂತಿ ದಿನದ ಹಿನ್ನೆಲೆ, ಚಿಕ್ಕಬಳ್ಳಾಪುರದಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ, 'ಮಾನವೀಯತೆ ಕಡೆ ನಡಿಗೆ' ಕಾಲ್ನಡಿಗೆ ಜಾಥಾ ಆಯೋಜಿಸಿತ್ತು. ಸಾವಿರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ಧಾರವಾಡ ಕೃಷಿ ಮೇಳ; 'ಸ್ಟಾರ್ಟ್ ಅಪ್ ಪೆವಿಲಿಯನ್' ವಿಶೇಷವಾಗಿದೆ – ಪ್ರಲ್ಹಾದ ಜೋಶಿ, ಶ್ಲಾಘನೆ.
- ಶಿಕ್ಷಣ ತಜ್ಞ, ಸರ್ ಸಿದ್ದಪ್ಪ ಕಂಬಳಿ ಅವರ ವಿಚಾರಗಳು ಇಂದಿಗೂ ಪ್ರಸ್ತುತ – ಈಶ್ವರ ಖಂಡ್ರೆ.
- ವಂಶವಾಹಿ ಚಿಕಿತ್ಸೆ; ಸುಲಭ ಹಾಗೂ ಯೋಗ್ಯ ದರದ ಆರೈಕೆಗಳ ಅಭಿವೃದ್ಧಿಗೆ ಕ್ರಮ – ದಿನೇಶ್ ಗುಂಡೂರಾವ.
- ಅಂತಾರಾಷ್ಟ್ರೀಯ ಕಡಲ ಸಚ್ಛತೆ ದಿನಾಚರಣೆ; ದೇಶದ 32 ಕಡಲ ತೀರಗಳಲ್ಲಿ ಸ್ವಯಂಸೇವಕರಿಂದ ಸ್ವಚ್ಛತಾ ಕಾರ್ಯ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>